'ಅಜ್ಞಾತವಾಸದ ಒಡನಾಡಿಗಳು'



ಕೃತಿ: 'ಅಜ್ಞಾತವಾಸದ ಒಡನಾಡಿಗಳು'
ಲೇಖಕರು : ಡಾ. ರಾಜೇಂದ್ರ ಮೋಹನ್ ಭಟ್ನಾಗರ್
ಅನುವಾದ : ಪ್ರೊ . ಜಿ. ಚಂದ್ರಶೇಖರ್
ಪ್ರಕಾಶನ : ಮಹಿಮಾ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು
ಫೋನ್: 9448759815
ಬೆಲೆ: 500 ಪುಟ: 430

ಸ್ವಾತಂತ್ರ್ಯ ಹೋರಾಟಗಾರ ಸುಭಾಷ್‌ಚಂದ್ರ ಬೋಸ್ ಅವರ ಬಗೆಗೆ ಕನ್ನಡದಲ್ಲಿ ಲಭ್ಯವಿರುವ ಪುಸ್ತಕಗಳು ಕಡಮೆ. ಬಿ.ಎಂ.ಚಂದ್ರಶೇಖರಯ್ಯ ಅವರ 'ನೇತಾಜಿ ಸುಭಾಷ್ ಚಂದ್ರ ಬೋಸ್', ಎಸ್.ಆರ್. ರಾಮಸ್ವಾಮಿ ಅವರ 'ಕೋಲ್ಮಿಂಚು' ಮೊದಲಾದವು. ಇವೆಲ್ಲ ಗಾತ್ರದಲ್ಲಿ ಸಣ್ಣವು, ಇಡೀ ಜೀವನ ಚರಿತ್ರೆಯನ್ನು ಒಳಗೊಂಡಿವೆ. ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳು ಹಲವಾರು, ಕೆಲವು ಆಯ್ದ ಸಂಗತಿಗಳನ್ನು ಕುರಿತವು. ನೇತಾಜಿಯವರ ಘನ ವ್ಯಕ್ತಿತ್ವಕ್ಕೆ ಅನುಗುಣವಾದ ಸುದೀರ್ಘ ಪುಸ್ತಕವೊಂದು ಈ ದೃಷ್ಟಿಯಿಂದ ಸ್ವಾಗತಾರ್ಹ.

ಡಾ. ರಾಜೇಂದ್ರ ಮೋಹನ್ ಭಟ್ನಾಗರ್ ಅವರು ಹಿಂದಿಯಲ್ಲಿ ನೇತಾಜಿಯವರ ಬಗ್ಗೆ ಮೂರು ಕಾದಂಬರಿಗಳು, ಎರಡು ನಾಟಕಗಳು, ಎರಡು ಸಂಶೋಧನಾ ಲೇಖನಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಬಹು ಚರ್ಚಿತವಾದ ಕಾದಂಬರಿ 'ಅಜ್ಞಾತವಾಸ್ ಕ ಹಮ್ ಸಫರ್.' ಇದನ್ನು ಕನ್ನಡಕ್ಕೆ ತಂದಿದ್ದಾರೆ ಪ್ರೊ. ಜಿ. ಚಂದ್ರಶೇಖರ್. 'ಅಜ್ಞಾತವಾಸದ ಒಡನಾಡಿಗಳು' ಹೆಸರೇ ಸೂಚಿಸುವಂತೆ, ಎರಡನೆಯ ಮಹಾಯುದ್ಧದ ಅನಂತರ ನೇತಾಜಿಯವರು ಯುದ್ಧಾಪರಾಧಿ ಎಂದು ಘೋಷಿಸಿಕೊಳ್ಳುವುದನ್ನು ತಪ್ಪಿಸಿಕೊಂಡು ಕೊನೆಯವರೆಗೂ ಮಾಡಿದ ಅಜ್ಞಾತವಾಸದ ಚಿತ್ರಣ ಇಲ್ಲಿದೆ.

ಶ್ರೀ ಚಂದ್ರಶೇಖರ್ ಅವರು ಕನ್ನಡದಲ್ಲಿ ೨೨ ಕೃತಿಗಳನ್ನು ರಚಿಸಿದ್ದು, ಇವುಗಳಲ್ಲಿ ಎಂಟು ಅನುವಾದಗಳು. ಅನುವಾದದಲ್ಲಿ ಅವರ ಕೈ ನುರಿತಿದೆ. ಪ್ರಾಸ್ತಾವಿಕ ನುಡಿಗಳಲ್ಲಿ ಶ್ರೀಯುತರು ನೇತಾಜಿಯವರ ಹಿನ್ನೆಲೆಯನ್ನು ಸೂಚಿಸಿದ್ದಾರೆ. ಕ್ರಾಂತಿಕಾರಿ ಎಂದು ಬ್ರಿಟಿಷರು ಸೆರೆಯಲ್ಲಿಟ್ಟಿದ್ದ ಬೋಸರು ವೇಷ ಬದಲಿಸಿ, ಜರ್ಮನಿಗೆ ಹೋಗಿ ಹಿಟ್ಲರನ ಸ್ನೇಹ ಗಳಿಸುತ್ತಾರೆ. ತನ್ನ ಕಾರ್ಯದರ್ಶಿಯಾಗಿದ್ದ ಎಮಿಲಿ ಷೆಂಕ್ಲ್ ಅವರನ್ನು ಮದುವೆಯಾಗಿ, ಅನಿತಾ ಎಂಬ ಮಗುವನ್ನು ಪಡೆಯುತ್ತಾರೆ. ಮಗುವಿಗೆ ಮೂರು ತಿಂಗಳಾಗಿರುವಾಗ ತಾಯ್ನಾಡಿಗೆ ಸ್ವಾತಂತ್ರ್ಯ ಪಡೆದುಕೊಳ್ಳುವ ಪ್ರಯತ್ನದಲ್ಲಿ ಜಲಾಂತರ್ಗಾಮಿಯಲ್ಲಿ ಜಪಾನ್‌ಗೆ ತೆರಳುತ್ತಾರೆ. ಅವರ ಬೆಂಬಲದಿಂದ 'ಭಾರತೀಯ ರಾಷ್ಟ್ರೀಯ ಸೈನ್ಯ' ಐಎನ್‌ಎ ಸ್ಥಾಪಿಸಿ, ಅಂಡಮಾನ್ ದ್ವೀಪಗಳು ಹಾಗೂ ಭಾರತದ ಈಶಾನ್ಯ ಭಾಗದ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡು, ಸ್ವತಂತ್ರ ಭಾರತದ ತಾತ್ಕಾಲಿಕ ಸರ್ಕಾರ ಸ್ಥಾಪಿಸಿ, ಅದಕ್ಕೆ ಎಂಟು ದೇಶಗಳ ಮಾನ್ಯತೆ ಪಡೆಯುತ್ತಾರೆ. 'ತುಮ್ ಮುಜೆ ಖೂನ್ ದೋ ಮೈ ತುಮ್ಹೆ ಆಜಾದಿ ದೂಂಗಾ' ಎಂಬುದು ಅವರ ಜನಪ್ರಿಯ ಘೋಷಣೆ.

ಮಿತ್ರ ರಾಷ್ಟ್ರಗಳಿಗೆ ಜಪಾನ್ ಶರಣಾಗತವಾದದ್ದು ಬೋಸ್ ಈ ಯುದ್ಧವನ್ನು ಕೈಬಿಡುವಂತೆ ಮಾಡಿತು. ೧೯೪೫ರ ಆಗಸ್ಟ್ ೧೮ರಂದು ತೈಪೇಯಿಂದ ಹೊರಟ ವಿಮಾನ ಅಪಘಾತವಾಗಿ, ಅದರಲ್ಲಿ ಸುಭಾಷ್‌ಚಂದ್ರ ಬೋಸ್ ಮರಣ ಹೊಂದಿದರು ಎಂಬ ಅಧಿಕೃತ ಸುದ್ದಿಯನ್ನು ಪ್ರಪಂಚ ಒಪ್ಪಿಕೊಳ್ಳುತ್ತದೆ. ಆದರೆ, ಇದು ಬೋಸ್ ಮತ್ತು ಒಡನಾಡಿಗಳು ಹಬ್ಬಿಸಿದ ಸುಳ್ಳು ಸುದ್ದಿ, ಜಪಾನಿನಿಂದ ಬೌದ್ಧ ಭಿಕ್ಷುವಿನ ವೇಷದಲ್ಲಿ ನೇತಾಜಿ ಮಂಚೂರಿಯಾ ಮಾರ್ಗವಾಗಿ ರಷ್ಯಾ ತಲುಪಿದರು, ಸ್ಟಾಲಿನ್‌ನನ್ನು ಭೇಟಿಯಾಗಲು ಬಯಸಿದರು, ರಷ್ಯನ್ ಗೂಢಚಾರರು ಅವರನ್ನು ಅಪಹರಿಸಿ, ಕೊನೆಯವರೆಗೂ ಬಂಧನದಲ್ಲಿಟ್ಟರು ಎಂಬುದೇ ಈ ಕಾದಂಬರಿಯ ಹೂರಣ. ಬೋಸ್ ಅವರು ತಮ್ಮ ಒಡನಾಡಿಗಳ ಮೇಲೆ ಎಷ್ಟೊಂದು ಪ್ರಭಾವ ಬೀರುತ್ತಿದ್ದರು ಎಂಬುದಕ್ಕೆ ಶ್ರೀ ಚಂದ್ರಶೇಖರ್ ತಮ್ಮ ಮುನ್ನುಡಿಯಲ್ಲಿ ನೀರಾ ಆರ್ಯ ಅವರ ಉದಾಹರಣೆಯನ್ನು ನೀಡುತ್ತಾರೆ. ತನ್ನನ್ನು ಹಿಂಬಾಲಿಸಿ, ಬೋಸ್ ಅವರ ಇರುವಿಕೆ ಗುರುತಿಸಿ, ಅವರ ಮೇಲೆ ಗುಂಡುಹಾರಿಸಿದ ತನ್ನ ಗಂಡ, ಬ್ರಿಟಿಷ್ ಸೇನಾಧಿಕಾರಿ ಶ್ರೀಕಾಂತ್‌ನನ್ನು ಚಾಕುವಿನಿಂದ ಕೊಲ್ಲುತ್ತಾಳೆ ನೀರಾ. ವಿಮಾನ ಅಪಘಾತದಲ್ಲಿ ಸತ್ತಿದ್ದಾರೆ ಎಂದು ಎಲ್ಲರೂ ಒಪ್ಪಿಕೊಂಡರೂ, ಅಂಡಮಾನ್‌ನಲ್ಲಿ ಬಂಧನದಲ್ಲಿದ್ದ ನೀರಾಳನ್ನು ಬೋಸ್ ಎಲ್ಲಿ ಎಂದು ಚಿತ್ರಹಿಂಸೆ ಕೊಟ್ಟಾಗ, ಹಿಂಸೆ ಸಹಿಸಲಾಗದೆ, ಬದುಕಿದ್ದಾರೆ ಎನ್ನುತ್ತಾಳೆ. ಎಲ್ಲಿ ಎಂದಾಗ, ನನ್ನ ಹೃದಯದಲ್ಲಿ ಬದುಕಿದ್ದಾರೆ ಎಂದಾಗ, ಎಡಭಾಗದ ಎದೆಯನ್ನು ಕತ್ತರಿಯಿಂದ ಕತ್ತರಿಸಲಾಗುತ್ತದೆ. ಕೊನೆಗೆ ಸ್ವತಂತ್ರ ಭಾರತದಲ್ಲಿ ಅವಳನ್ನು ಬದುಕಲು ಬಿಟ್ಟರೂ, ಹೈದರಾಬಾದಿನಲ್ಲಿ ಹೂ ಮಾರಿಕೊಂಡು ಬಡತನದಲ್ಲಿ ಸಾಯುತ್ತಾಳೆ. (ಈ ಪ್ರಸಂಗ ಈ ಪುಸ್ತಕದಲ್ಲಿಲ್ಲ.)

ಮೊದಲ ನೂರು ಪುಟಗಳಲ್ಲಿ ಎಮಿಲಿಯ ಬದುಕು, ಸುಭಾಷರ ನೆನಪುಗಳು ಸುಂದರವಾಗಿ ನಿರೂಪಿಸಲ್ಪಟ್ಟಿದೆ. ಮುಂದೆಯೂ ಕೂಡ ಎಮಿಲಿ ಅಲ್ಲಲ್ಲಿ ಬರುತ್ತಾಳೆ. ಉಪಾಧ್ಯಾಯಿನಿ ಸಾರಾ ಲಾರೆನ್ಸ್ ಬಾಲಕ ಬೋಸರ ಮಹಾನ್ ವ್ಯಕ್ತಿತ್ವವನ್ನು ಸರಿಯಾಗಿ ಗುರುತಿಸಿ, ಅಶಾಂತಿ ಕವಿದಾಗ ಕಣ್ಮುಚ್ಚಿ ನಿನ್ನೊಳಗೆ ಪ್ರವೇಶಿಸಿ, ಮಾರ್ಗ ಹುಡುಕಿಕೋ ಎಂದು ಹರಸುತ್ತಾಳೆ. ಮುಂದೆ ದಿಕ್ಕು ತೋರದ ಸಂದರ್ಭ

ಗಳಲ್ಲಿ ಬೋಸ್ ಹಾಗೆ ಮಾಡಿ, ಮನಶ್ಶಾಂತಿ ಪಡೆದುಕೊಳ್ಳುವುದನ್ನು ಕಾಣುತ್ತೇವೆ. ಮಠವೊಂದರಲ್ಲಿ ಇನ್ನೇನು ಸಿಕ್ಕಿಬೀಳಬೇಕು ಎನ್ನುವಾಗ ಅಲ್ಲಿಂದ ತಪ್ಪಿಸಿಕೊಳ್ಳಲು ಧ್ಯಾನದಲ್ಲಿ ದೊರೆತ ಸುಳಿವು ಸಹಾಯಮಾಡುತ್ತದೆ.

ಅಪಘಾತದ ಹಿಂದಿನ ಒಡನಾಡಿಗಳು ಜನರಲ್ ಕೆಮರೂ, ಕಾವುಂಟ್ ತೆರಾಉಚಿ, ಜನರಲ್ ಇಸೋವಾ ರಷ್ಯಾ ಅಥವಾ ಚೀನಾಕ್ಕೆ ಹೋಗದಿರಲು ಸೂಚಿಸುತ್ತಾರೆ. ತಾಕಿಜಾವಾ ಸುಭಾಷರೊಂದಿಗೆ ಇರಲು ನಿರ್ಧರಿಸುತ್ತಾರೆ. ತಾಕಿಜಾವಾ, ನಾಗಾತೋಮೋರನ್ನು ಸಾಯಿಸಿ, ಸುಭಾಷರನ್ನು ಕೊಲ್ಲಲು ಡೇವಿಡ್ ಮತ್ತಿತರರು ಬಂದಾಗ, ಸುಭಾಷರನ್ನು ಏಕಮುಖಿವಾಗಿ ಪ್ರೀತಿಸುವ ರಷ್ಯನ್ ಗೂಢಚಾರಿಣಿ ಲೀದಿಯಾ ರಕ್ಷಿಸುತ್ತಾಳೆ. ರಷ್ಯಾ ತಲುಪುವವರೆಗೆ ಜೊತೆಗಿರುತ್ತಾಳೆ. ರೇಡಿಯೋದಲ್ಲಿ ತಾವು ವಿಮಾನ ದುರಂತದಲ್ಲಿ ತೀರಿಕೊಂಡ ಸುದ್ದಿ ಬಂದದ್ದನ್ನು ಕೇಳಿ, ಸುಭಾಷ್ ಅಲ್ಲಿಂದ ಹೊರಡಲು ನಿರ್ಧರಿಸಿದರೂ, ಲೀದಿಯಾ ಬಿಡದೆ ಅವರು ಪ್ರಸಿದ್ಧ ಬೌದ್ಧ ಗುರು ಕೋಬೋ ದೇಶಿ ಹತ್ತಿರ ತರಬೇತಿ ಪಡೆಯಲು ಸೇರಿಸುತ್ತಾಳೆ. ಈಗ ಭಿಕ್ಕುವಾದ ಬೋಸರ ಹೆಸರು ಜಿಯಾಮಿ, ಪ್ರಾಚೀನ ಋಷಿಯ ಹಾಗಿದ್ದಾರೆ.

ಬ್ರಿಟಿಷರು ನೇತಾಜಿ ಸಾವನ್ನು ಒಪ್ಪಿ, ಫೈಲ್ ಕ್ಲೋಸ್ ಮಾಡಿದ್ದರೂ, ಒಳಗೊಳಗೇ ತೀವ್ರ ವಿಚಾರಣೆ ನಡೆಸಿದ್ದಾರೆ. ಸಹಾಯಕ ದಯಾ ಲಿಜ್ ಗುಂಡೇಟು ತಗುಲಿ ಬಂದಾಗ, ನೇತಾಜಿ ಸರ್ಜನ್ನರಂತೆ ಗುಂಡು ತೆಗೆದು ಆರೈಕೆ ಮಾಡಿ, ಭಿಕ್ಷುಗಳೊಡನೆ ಕಳಿಸಿಕೊಡುತ್ತಾರೆ. ತಾವು ಒಪ್ಪಂದ ಮಾಡಿಕೊಂಡಿದ್ದ ಆಂದ್ರೆಯಿಯ ಜೊತೆ ಸುಭಾಷ್-ಲೀದಿಯಾ ಹೊರಡುತ್ತಾರೆ. ಅರ್ಧ ದಾರಿಯಲ್ಲಿ ಆಂದ್ರೆಯಿ ಬೇರೆ ವ್ಯವಸ್ಥೆ ಮಾಡಿದೆ ಎಂದು ಮಾಸ್ಕೋಗೆ ಹೋಗುವ ಕಾರುಗಳನ್ನು ತೋರಿಸುತ್ತಾನೆ. ಇಲ್ಲಿಂದ ಮುಂದೆ ಸುಭಾಷರು ಏಕಾಂಗಿಯಾಗಿ ರಷ್ಯನ್ ಗೂಢಚಾರರ ಸೆರೆಯಾಗುತ್ತಾರೆ. ಬದುಕಿದ್ದರೂ ಸತ್ತ ಮೇಲೆ ಪ್ರಪಂಚದಲ್ಲಿ ಅಜ್ಞಾತವಾಸ ಕಡುಕಷ್ಟವೆಂಬುದು ಅನುಭವಕ್ಕೆ ಬರುತ್ತದೆ.

ಬಂಧನದಲ್ಲಿ ಅಡುಗೆಯವ (ಸೈನ್ಯಾಧಿಕಾರಿ) ಮಿಖಾಯಿಲ್ ಬೋಸರ ಭಕ್ತನಾಗುತ್ತಾನೆ. ಕರ್ನಲ್ ಪೆಚೋರಿನ್, ಡಾ. ಓಲ್ಗಾ, ರೋರಿಕ್ ಕೂಡ ಬೋಸರ ಗೆಳೆಯನಾಗುತ್ತಾರೆ. ಮಿಖಾಯಿಲ್ ಭಾರತ ಸ್ವಾತಂತ್ರ್ಯ ಪಡೆದ ಸುದ್ದಿ ಹೇಳುತ್ತಾನೆ. ದೇಶ ಇಬ್ಭಾಗವಾದದ್ದು ಬೇಸರ ತರಿಸುತ್ತದೆ. ರಾಯಭಾರಿಯಾಗಿದ್ದ ರಾಧಾಕೃಷ್ಣನ್ ಭೇಟಿಯಾಗಲು ಬರುತ್ತಾರೆ. ಗಾಂಧಿ ಇನ್ನಿಲ್ಲ ಎಂದು ಅವರಿಂದ ತಿಳಿಯುತ್ತದೆ. ಬೋಸ್ ಕೃಷ್ಣನ್ನರನ್ನು 'ಏಕೆ ತನ್ನನ್ನು ರಷ್ಯಾ ಬಂಧಿಸಿ ಇಟ್ಟಿದೆ? ನನ್ನನ್ನು ಹೊರತನ್ನಿ' ಎಂದು ಕೇಳುತ್ತಾರೆ. ಉತ್ತರ ಕೊಡಲಾಗದೆ ಕೃಷ್ಣನ್ ಹಿಂದಿರುಗುತ್ತಾರೆ.

ಮಿತ್ರ ರಾಷ್ಟ್ರಗಳು ಮತ್ತು ಭಾರತದ ಪ್ರತಿಕ್ರಿಯೆ ತಿಳಿಯಲೋಸುಗ ಸುಭಾಷರ ಪ್ರತಿಕೃತಿಗಳಾಗಿ ಸಮೀರ್ ದಾ, ಅತುಲ್ ಸೇನ್ (ಬೋಸ್) ಮತ್ತು ಇನ್ನೊಬ್ಬರನ್ನು ತರಬೇತಿ ಮಾಡಲಾಗುತ್ತದೆ. ಇವರಲ್ಲಿ ಸಮೀರ್ ದಾ ಗುಂಡೇಟಿಗೆ ಬಲಿಯಾಗುತ್ತಾನೆ. ಅತುಲ್ ತಪ್ಪಿಸಿಕೊಂಡು ಕೂಚ್‌ಬಿಹಾರಿನ ಶಾಲ್‌ಮಾರಿ ಆಶ್ರಮದ ಶಾರದಾನಂದನಾಗಿದ್ದಾನೆ ಎಂದು ಖ್ರುಶ್ಚೇವ್‌ರಿಗೆ ಪಾಂಶಿನ್ ಹೇಳುತ್ತಾನೆ. ಸುಭಾಷ್ ತಮ್ಮನ್ನು ಬಿಡುಗಡೆಗೊಳಿಸಲು ಖ್ರುಶ್ಚೇವ್‌ರಿಗೆ ಪತ್ರ ಬರೆದಿದ್ದಾರೆ. ಅತುಲ್‌ನನ್ನು ಚೀನಿಯರು ಅಪಹರಿಸಿ, ಭಾರತದ ಆಶ್ರಮದಲ್ಲಿ ತಮ್ಮ ಮಾತು ಕೇಳುವಂತೆ ತಮ್ಮ ಕಣ್ಗಾವಲಿನಲ್ಲೆ ಇರುವಂತೆ ಮಾಡಿಕೊಂಡಿದ್ದಾರೆ. ಸುಭಾಷರ ಡಾಕ್ಟರ್ ಸ್ಲೋ ಪಾಯಿಸನ್ ಕೊಡುತ್ತ ಬಂದು, ಅವರ ಆರೋಗ್ಯ ಇಳಿಮುಖಿವಾಗಿದೆ. ಹೊರಗೆ ನಡೆದಾಡಲು ಬಿಡುತ್ತಾರೆ. ಬಿಡುಗಡೆಯ ಸುದ್ದಿ ಕೇಳಿ, ಸುಭಾಷ್ ಗೆಲುವಾಗುತ್ತಾರೆ. ಚೀನಾ ದಾಳಿ ಮಾಡಿ, ಭಾರತದ ನೆಲ ಅಪಹರಿಸಿದ ವಿಷಯವನ್ನು ಅಧಿಕಾರಿಗಳು ಮಾತನಾಡಿಕೊಳ್ಳುತ್ತಾರೆ. ಡಾ. ಮಾರ್ಯ ಸುಭಾಷರಿಗೆ ಪಾಕ್-ಭಾರತ ಯುದ್ಧದಲ್ಲಿ ಭಾರತ ಗೆದ್ದುದು, ಈ ಬಗ್ಗೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲು ಬಂದಿರುವ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಸುಭಾಷರನ್ನು ಭೇಟಿಯಾಗಲಿರುವುದನ್ನು ತಿಳಿಸುತ್ತಾಳೆ.

ಭೇಟಿಯಾದ ಶಾಸ್ತ್ರಿಯವರ ವಿನಯ, ಸರಳತೆ ಸುಭಾಷರನ್ನು ಗೆಲ್ಲುತ್ತದೆ. ಶಾಸ್ತ್ರಿಯವರು ಸುಭಾಷರ ಆವಶ್ಯಕತೆ ಭಾರತಕ್ಕೆ ಹೆಚ್ಚಿದೆ, ಬಿಡುಗಡೆ ಮಾಡಲಾಗುವುದು ಎನ್ನುತ್ತಾರೆ. ಆದರೆ ಪತ್ನಿ ಫೋನಿನಲ್ಲಿ ಶಾಸ್ತ್ರಿಯವರು 'ದೇಶದ ಜನ ಈ ಒಪ್ಪಂದವನ್ನು ಒಪ್ಪುವುದಿಲ್ಲ, ಆದರೆ ನನ್ನ ಜೊತೆ ಏನು ತೆಗೆದುಕೊಂಡು ಬರ್ತೀನಿ ಅಂದರೆ ಜನ ಕುಣಿದು ಕುಪ್ಪಳಿಸುತ್ತಾರೆ' ಎಂದದ್ದು ಅವರ ಸಾವಿಗೆ ಕಾರಣವಾಗುತ್ತದೆ ಹಾಗೂ ಸುಭಾಷರನ್ನು ಬಿಡುಗಡೆ ಮಾಡುವುದಿಲ್ಲ. ಡಾ. ಮಾರ್ಯಾ ತಾನೇ ಸುಭಾಷರನ್ನು ಹೇಗಾದರೂ ಭಾರತ ತಲುಪಿಸುವ ಯೋಜನೆ ಹಾಕುತ್ತಾಳೆ. ಪಾಂಶಿನ್ ಅವಳ ಯೋಜನೆ ಗೊತ್ತಾಗಿ ಗದರುತ್ತಾನೆ. ಅವಳು ಭಾರತಕ್ಕೆ ಕಳಿಸಿದ್ದ ಪತ್ರಗಳನ್ನು ಅವಳೆದುರು ಇಡುತ್ತಾನೆ. ಎಮಿಲಿ ಬಗ್ಗೆ ಕನವರಿಸುತ್ತ, 'ತುಮಿ ಬಂಧು ತುಮಿ ನಾಥ' ಹಾಡನ್ನು ಹಾಡುತ್ತ ಸುಭಾಷ್ ತೀರಿಕೊಳ್ಳುತ್ತಾರೆ.

ಈಚೆಗೆ ಕನ್ನಡದಲ್ಲಿ ಬರುತ್ತಿರುವ ಪುಸ್ತಕಗಳಂತೆ ಇದರ ಮುದ್ರಣ ಗುಣಮಟ್ಟ ತುಂಬ ಚೆನ್ನಾಗಿದೆ; ಆದರೆ ಮುದ್ರಣ ದೋಷಗಳು ಅತಿ ಹೆಚ್ಚು. ಮುಖ್ಯವಾಗಿ, ಮಧ್ಯದಲ್ಲಿ ಬರುವ ಬೇರೆ ಬೇರೆ ವಿಷಯಗಳ ನಡುವೆ ಅಧಿಕ ಜಾಗ ಅಥವಾ ನಕ್ಷತ್ರ ಚಿಹ್ನೆಗಳನ್ನು ಹಾಕಿಲ್ಲವಾಗಿ, ಕಲಸುಮೇಲೋಗರವಾಗಿ, ಅರ್ಥ ಮಾಡಿಕೊಳ್ಳುವುದೇ ಕಷ್ಟ. ಉದಾಹರಣೆಗೆ, ಮೊದಲ ಪುಟಗಳಲ್ಲಿ ಎಮಿಲಿ ಸುಭಾಷರೊಡನೆ ಮಾತನಾಡುತ್ತಿರುವಾಗ ಗೋಯಬೆಲ್ಸ್‌ರವರ ಫೋನ್ ಬರುತ್ತದೆ! ಉದ್ಧರಣ ಚಿಹ್ನೆಗಳ ಬಳಕೆ ಅಸಮರ್ಪಕ. ಹೆಸರುಗಳ ಕಾಗುಣಿತ ಬದಲಾಗುತ್ತದೆ, ಕೆಲವೊಮ್ಮೆ ಹೆಸರೇ ಬದಲಾಗುವುದೂ ಉಂಟು. ಸುಭಾಷರ ಪ್ರತಿಕೃತಿ ಅತುಲ್ ಬೋಸ್ ಅದೇ ಪ್ಯಾರಾದಲ್ಲಿ ಅತುಲ್ ಸೇನ್ ಆಗುತ್ತಾನೆ. ಅವರಿದ್ದ ಬರ್ಮಾದ ಜೈಲು ಮಾಡೆಲ್, ಮಾಡಲೆ ಆಗುತ್ತದೆ. ಸುಭಾಷ್ ಚಂದ್ರ ಬೋಸ್ ಬಗ್ಗೆ ಇಷ್ಟು ದೊಡ್ಡ ಕಾದಂಬರಿ ಕನ್ನಡದಲ್ಲಿ ಬರುತ್ತಿರುವುದು ಸ್ವಾಗತಾರ್ಹ. ಪ್ರೊ.ಜಿ.ಚಂದ್ರಶೇಖರ್ ಅವರ ಪ್ರಯತ್ನ ಮೆಚ್ಚತಕ್ಕದ್ದು.

—ಡಾ.ಹೆಚ್. ಪಾಂಡುರಂಗ ವಿಠಲ